ದಿನಾಂಕಃ**21.11.2025** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಲಾಯಿತು

ಪಾಟೀ ಸವಾಲುಃ ಪ್ರತಿವಾದಿಯರ ಪರ ಶ್ರೀ ಎಸ್.ಸಿ.ಎನ್. ವಕೀಲರಿಂದಃ-

ನಾನು ಡಿಪ್ಲಮೋ ಇನ್ ಸಿವಿಲ್ ಓದಿರುತ್ತೇನೆ. ನನಗೆ 58 ವರ್ಷ ವಯಸ್ಸು. ನಾನು ಈಗ ಕಡೂರು ಮುನಿಸಿಪಲ್ ಕೌನ್ಸಿಲರ್ ಎಂದರೆ ಸರಿಯಲ್ಲ. ನನ್ನ ಹೆಂಡತಿ ಕೌನ್ಸಿಲರ್ ಆಗಿರುತ್ತಾರೆ. ನನ್ನ ತಂದೆಯ ಕಾಲದಿಂದಲೂ ಕೆ. ಹೊಸಹಳ್ಳಿ ಗ್ರಾಮದಲ್ಲೇ ವಾಸವಾಗಿರುತ್ತೇವೆ. ಈ ದಾವೆಯನ್ನು ಯಾವ ವಿಚಾರಕ್ಕೆ ಸಲ್ಲಿಸಿರುತ್ತೇವೆ ನಾನು ತಿಳಿದುಕೊಂಡಿರುತ್ತೇನೆ. ಪ್ರತಿವಾದಿಯರು ಏನು ತಕರಾರು ಸಲ್ಲಿಸಿರುತ್ತಾರೆ ಎಂದು ನಾನು ತಿಳಿದುಕೊಂಡಿರುತ್ತೇನೆ. ಕೆ.ಹೊಸಹಳ್ಳಿ ಗ್ರಾಮವು 1994 ರ ಹಿಂದೆ ಚಿಕ್ಕಂಗಳ ಪಂಚಾಯಿತಿಗೆ ಸೇರಿದ ಗ್ರಾಮ ಎಂದರೆ ಸರಿ. ದಿನಾಂಕಃ 29.03.1994 ರಂದು ಸರ್ಕಾರವು ಆದೇಶ ಸಂಖ್ಯೆ ಎನ್.ಹೆಚ್. 182 ರಂತೆ ಆದೇಶ ಮಾಡಿ ಚಿಕ್ಕಂಗಳ ಗ್ರಾಮ ಪಂಚಾಯಿತಿ ಯಿಂದ ಕಡೂರು ಪುರಸಭೆಗೆ ಕೆ.ಹೊಸಹಳ್ಳಿ ಗ್ರಾಮಕ್ಕೆ ಸಂಬಂಧಪಟ್ಟಂತೆ ಎಲ್ಲಾ ದಾಖಲೆಗಳನ್ನು ಹಸ್ತಾಂತರಿಸಿರುತ್ತಾರೆ ಎಂದರೆ ಸರಿ.

ನಾನು ಹಾಜರುಪಡಿಸಿದ ನಿಪಿ-5 ರ ಹಕ್ಕುಪತ್ರವನ್ನು 1976-77 ನೇ ಸಾಲಿನಲ್ಲಿ ನನ್ನ ತಂದೆಯವರಿಗೆ ನೀಡಿರುತ್ತಾರೆ. ಸದರಿ ಹಕ್ಕುಪತ್ರದಲ್ಲಿ ದಿನಾಂಕ ನಮೂದಾಗಿರುವುದಿಲ್ಲ. ನಿಪಿ-5 ತಹಶೀಲ್ದಾರ್, ಕಡೂರು ರವರು ನೀಡಿರುವ ಹಕ್ಕು ಪತ್ರ ಎಂದರೆ ಸರಿ. ನಿಪಿ-5 ರ ಪ್ರಕಾರ ಗಿರಿಯಪ್ಪ ಯಾನೆ ಮರಿ ಸೋಮಣ್ಣ ಬಿನ್ ತಿಮ್ಮಣ್ಣ ರವರಿಗೆ ನೀಡಿದ ಹಕ್ಕುಪತ್ರ ಎಂದರೆ ಸರಿ. ಗಿರಿಯಪ್ಪ ಯಾನೆ ಮರಿ ಸೋಮಣ್ಣ ರವರು ಒಂದೇ ವ್ಯಕ್ತಿ ಎಂದು ತೋರಿಸಲು ನಾನು ನ್ಯಾಯಾಲಯಕ್ಕೆ ದಾಖಲಾತಿಯನ್ನು ಹಾಜರುಪಡಿಸಿರುತ್ತೇನೆ. ನಿಪಿ-5 ರ ಆಧಾರದ ಮೇಲೆ ಯಾವ ಗ್ರಾಮ ಪಂಚಾಯಿತಿಯಲ್ಲಿ ಖಾತೆ ಮಾಡಿರುತ್ತಾರೆ ಎಂದು ತೋರಿಸಲು ದಾಖಲೆಯನ್ನು ಹಾಜರುಪಡಿಸಿರುತ್ತೇನೆ.

ಮುಂದುವರಿದು ಪಾಟೀ ಸವಾಲು ಮಾಡಲು ಕಾಲಾವಕಾಶ ಕೋರಿದ್ದರಿಂದ ಪಾಟೀ ಸವಾಲು ಮಾಡಲು ಕಾಲಾವಕಾಶ ನೀಡಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಒ,

ಸಹಿ/-
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಃದಃನ್ಯಾಃದಂ.,ರವರು, ಕಡೂರು.